C.C.No.283/2016 PW-10

ದಿನಾಂಕ : 04-12-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದೂವರೆದ ಪಾಟೀ ಸವಾಲುಃ
ಆರೋಪಿತರ ಶ್ರೀ ಎ.ಬಿ.ಎಂ. ವಕೀಲರಿಂದ

ತನಿಖಾಧಿಕಾರಿಗಳು ನನಗೆ ದಾಖಲೆಯನ್ನು ಪರಿಶೀಲಿಸಿ ವರದಿ ಸಲ್ಲಿಸುವಂತೆ ಸೂಚನೆ ಕೊಟ್ಟಿರುವುದಿಲ್ಲ. ಆಡಿಟ್ ಮಾಡಲು ಪ್ರತ್ಯೇಕ ಇಲಾಖೆ ಇದೆ. ಆನ್‌ಲೈನ್‌ನಲ್ಲಿ ಆಗಿರುವ ಎಲ್ಲಾ ವ್ಯವಹಾರಗಳು ಚಾಸಾ-11 ರವರಿಗೆ ಗೊತ್ತಿದೆ. ಅವರು ಎಂಐಎಸ ಕೋ-ಆಡಿನೇಟರ್ ಆಗಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಹೇಳಿರುವ ವಿಚಾರವು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. 2014 ರ ಅವಧಿಗೆ ಗೌರ(ಬಿ) ಗ್ರಾಮ ಪಂಚಾಯತಿ ವ್ಯವಹಾರಗಳಿಗೆ ವರದಿ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 40-ಕಡತಗಳನ್ನು ನನ್ನ ಪರೀಶಿಲನೆಗೆ ಕೊಟ್ಟಿದದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2013-14 ನೇ ಸಾಲಿನಲ್ಲಿ 368-ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಪುಸ್ತಕ ನೀಡಿಲ್ಲ, ಕಾನೂನು ಪ್ರಕಾರ ಹಣ ಪಾವತಿ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೂಲಿ ಕಾರ್ಮಿಕರ ಸಹಿ ಪಡಿದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಿಲ್ಲಿ ಹೆಚ್ಚಿನ ಹಣ ಪಾವತಿ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ05.02.2014 ರಂದು ಗೌರ(ಬಿ) ಗ್ರಾಮ ಪಂಚಾಯತಿಯಲ್ಲಿ 2013-14 ಮತ್ತು 2014-15 ನೇ ಸಾಲಿನಲ್ಲಿ ದಾಖಲೆಗಳನ್ನು ಕಾಮಗಾರಿಗಳ ಕಡತಿಗಳನ್ನು ಪರಿಶೀಲಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಾಮಗಾರಿಗಳ ಹೆಬ್ಬಟ್ಟಿನ ಗುರುತು ಒಂದೇ ರೀತಿಯಾಗಿ ಕಂಡು ಬಂದಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೂಲಿಗಾರರ ಸಹಿ ಇಲ್ಲದೇ ಹಣ ಪಾವತಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2013-14 ಮತ್ತು 2014-15 ನೇ ಸಾಲಿನಲ್ಲಿ ಸಾಮಾಗ್ರಿ ವೆಚ್ಚ ಹಾಗೂ 2011 ರಿಂದ 2013 ಮತ್ತು 2013-15 ನೇ ಸಾಲಿನಲ್ಲಿ ಕಾಮಗಾರಿ ಕೂಲಿ ದಾಖಲೆ ಹಾಜರು ಪಡಿಸಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೂಲಿಗಾಗಿ ಹಣ ಕೂಲಿದಾರರಿಗೆ ಹಾಗೂ ಸಾಮಾಗ್ರಿಗಳ ಪೂರೈಕೆದಾರರಿಗೆ ನೇರವಾಗಿ ಖಾತೆಗೆ ಹಣ ಜಮಾ ಆಗುತ್ತದೆ ಎಂದರೆ ಸರಿ. ಕೂಲಿದಾರರಿಗೆ ಹಾಗೂ ಸಾಮಾಗ್ರಿಗಳ ಪೂರೈಕೆದಾರರಿಗೆ ಹಣವನ್ನು ಜಮೆ ಮಾಡಲು 1 ಹ ಾಗೂ 2 ನೇ ಆರೋಪಿತರನ್ನು ಜಿಲ್ಲಾ ಪಂಚಾಯತ ಸಿ.ಯು.ಓ. ರವರು 5% ರಷ್ಟು ಹಣವನ್ನು ಕೇಳಿದ್ದು, ಅದನ್ನು ಅವರು ಪಾವತಿಸಲು ನಿರಾಕರಿಸಿದಾಗ ಆರೋಪಿತರ ವಿರುದ್ಧ ದೂರ ದಾಖಲಿಸಿಲು ಆದೇಶ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5 ನೇ ಆರೋಪಿತನ ಖಾತೆಗೆ ಯಾವುದೇ ಹಣ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲೆ ಪರಿಶೀಲಿಸದೇ ಸಿ.ಯು.ಓ. ರವರ ಮಾತನ್ನು ಕೇಳಿ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು **)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ